ಕರ್ನಾಟಕ ವಿಧಾನ ಸಭೆ

ಸೋಮವಾರ ೨೩ನೇ ಮಾರ್ಚ್ ೧೯೯೨

ಸದನವು, ವಿಧಾನಸೌಧದ ಮೊದಲನೆಯ ಮಹಡಿಯಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೨೦ ನಿಮಿಷಕ್ಕೆ ಆರಂಭವಾಯಿತು.

(ಸನ್ಮಾನ್ಯ ಅಧ್ಯಕ್ಷರವರಾದ ಶ್ರೀ ಎಸ್. ಎಂ. ಕೃಷ್ಣ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

ಪ್ರಶ್ನೋತ್ತರಗಳು.

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.)

ವೈ. ಕಗ್ಗಲ್ಲ, ಜೋಳದರಾಶಿ (ಬಳ್ಳಾರಿ ತಾಲ್ಲೂಕು) ಏತ ನೀರಾವರಿ ಯೋಜನೆಯ ಸ್ಥಿತಿ

೩೮೩ (೧೪೭೮) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೂಡು):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ವೈ. ಕಗ್ಗಲ್ಲ, ಜೋಳದ ರಾಶಿ ಮುಂತಾದ ಹಳ್ಳಿಗಳ ಜಮೀನಿಗೆ ನೀರೊದಗಿಸಲು ಏತ ನೀರಾವರಿ ಯೋಜನೆ ಬಗ್ಗೆ ಮಾನ್ಯ ನೀರಾವರಿ ಮಂತ್ರಿಗಳು ತಿಳಿಸುವಿರೇ?

ಆ) ಈ ಯೋಜನೆಯನ್ನೇನಾದರೂ ೧೯೯೨-೯೩ರ ಆಯವ್ಯಯದಲ್ಲಿ ಸೇರಿಸಲಾಗಿದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ) ಈ ಏತ ನೀರಾವರಿ ಯೋಜನೆ ಅನ್ವೇಷಣಾ ಹಂತದಲ್ಲಿದೆ.

ಆ) ಇಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ವೈ. ಕಗ್ಗಲ್ ಮತ್ತು ಜೋಳದ ರಾಶಿ ಏತ ನೀರಾವರಿ ಯೋಜನೆಯಿಂದ ಆರೇಳು ಸಾವಿರ ಎಕರೆ ನೀರಾವರಿಯಾಗುತ್ತದೆ. ಆ ಭಾಗದಲ್ಲಿ ಬಡವರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರು ಇದ್ದಾರೆ. ಈ ಏತ ನೀರಾವರಿ ಯೋಜನೆಯನ್ನು ಮಾಡಿಕೊಡಬೇಕೆಂದು ಕೇಳಿ ಎರಡು ವರ್ಷಗಳು ಆಯಿತು. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಮಾನ್ಯ ಸಭಾಧ್ಯಕ್ಷರೇ, ಅದರ ಬಗ್ಗೆ ಇನ್ನೂ ಸಮೀಕ್ಷೆ ನಡೆಯುತ್ತಿದೆ. ೬೫೦೦ ಎಕರೆ ನೀರಾವರಿಯಾಗುತ್ತದೆ. ಬರುವ ವರ್ಷದಲ್ಲಿ ಅದರ ಬಗ್ಗೆ ಸಾಧ್ಯವಾದಷ್ಟು ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಅದು ಏನೋ ಅನ್ವೇಷಣೆ ನಡೆಯುತ್ತಿದೆಯೆಂದು ಬರೆದಿದ್ದೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಹೌದು.

ಕುಮುದ್ವತಿ ನದಿಯ ಸೇತುವೆಗೆ ತೆರಿಗೆ ಸಂಗ್ರಹ

೩೮೬ (೧೫೫೫) ಶ್ರೀ ಆಂಜನಮೂರ್ತಿ (ನೆಲಮಂಗಲ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ರಾಷ್ಟ್ರೀಯ ಹೆದ್ದಾರಿ ೪೮ರಲ್ಲಿ ಕುಮುದ್ವತಿ ನದಿಗೆ ಸೇತುವೆ/ನಿರ್ಮಾಣ ಮಾಡಿದ್ದು ಅಲ್ಲಿ ಓಡಾಡುತ್ತಿರುವ ವಾಹನಗಳಿಗೆ ಇನ್ನೂ ಸುಂಕವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ರೀತಿ ವಸೂಲು ಮಾಡಲು ಅನುಮತಿ ನೀಡಲಾಗಿದೆಯೇ?

ಇ) ಖಾಸಗಿ ವಾಹನ ಮಾಲೀಕರು ಹಾಗೂ ರಸ್ತೆ ಸಾರಿಗೆ ಸಂಸ್ಥೆಯವರ ಹತ್ತಿರ ೨೫ ಪೈಸೆಯಂತೆ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ರೀತಿಯಾದ ವಸೂಲಿಯಿಂದ ಸಾರ್ವಜನಿಕರಿಗಾಗುತ್ತಿರುವ ತೊಂದರೆಯನ್ನು/ತಪ್ಪಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಜಿ. ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ನೀಡಲಾಗಿದೆ.

ಇ) ಇಲ್ಲ.

ಈ) ರಾಷ್ಟ್ರೀಯ ಹೆದ್ದಾರಿ ಕಾಯಿದೆ ಪ್ರಕಾರ ಭಾರತ ಸರ್ಕಾರದ ಪತ್ರ ಸಂಖ್ಯೆ ಪಿಎಲ್-೨೩(೧):೭೭ ದಿನಾಂಕ ೧೬-೧೨-೧೯೭೮ರಲ್ಲಿನ ಸೂಚನೆಗಳಂತೆ ಈ ಸೇತುವೆ ನಿರ್ಮಾಣ ವೆಚ್ಚ, ಬಡ್ಡಿ, ನಿರ್ವಹಣಾ ವೆಚ್ಚ ಇವೆಲ್ಲ ಮೊತ್ತವೂ ವಸೂಲಿಯಾದ ತಕ್ಷಣ ಕರವಸೂಲಿಯನ್ನು ನಿಲ್ಲಿಸಲಾಗುವುದು.

ಶ್ರೀ ಆಂಜನಮೂರ್ತಿ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇರತಕ್ಕದ್ದು ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ರಾಷ್ಟ್ರೀಯ ಹೆದ್ದಾರಿ ೪೮ರಲ್ಲಿ ಕುಮುದ್ವತಿ ನದಿಗೆ ಸೇತುವೆ ನಿರ್ಮಾಣ ಮಾಡಿದ್ದು ಅಲ್ಲಿ ಓಡಾಡುತ್ತಿರುವ ವಾಹನಗಳಿಗೆ ಇನ್ನೂ ಸುಂಕವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರದ ಗಮನಕ್ಕೆ ಬಂದಿದೆಯೆಂದು ಉತ್ತರ ಕೊಟ್ಟಿದ್ದಾರೆ. ''ಆ ರೀತಿ ವಸೂಲಿ ಮಾಡಲು ಅನುಮತಿ ನೀಡಲಾಗಿದೆಯೆ?'' ಎಂದು ಕೇಳಿದ್ದಕ್ಕೆ ಅನುಮತಿಯನ್ನು ನೀಡಲಾಗಿದೆಯೆಂದು ಹೇಳಿದ್ದಾರೆ. ಮೂರನೆಯ ಪ್ರಶ್ನೆ ''ಖಾಸಗಿ ವಾಹನದ ಮಾಲೀಕರು ಹಾಗೂ ರಸ್ತೆ ಸಾರಿಗೆ ಸಂಸ್ಥೆಯವರ ಹತ್ತಿರ ೨೫ ಪೈಸೆಯಂತೆ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?'' ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ನನಗೆ ಆಶ್ಚರ್ಯವಾಗುತ್ತಿದೆ. ನನ್ನ ಕಡೆಯ ಪ್ರಶ್ನೆ ಸ್ವಲ್ಪ ತಿದ್ದುಪಡಿಯಾದಂತೆ ಕಾಣುತ್ತಿದೆ. ಕುಮುದ್ವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ತರಹ ಮೂರು ಕಡೆ ಸೇತುವೆಗಳನ್ನು ಕಟ್ಟಲಾಗಿತ್ತು. ಹಾಸನದ ಹತ್ತಿರ ಮತ್ತು ನಂಜನಗೂಡು ಹತ್ತಿರ ಕಟ್ಟಲಾಗಿತ್ತು. ಅಲ್ಲಿ ಸುಂಕವನ್ನು ವಸೂಲಿ ಮಾಡಿ ನಿಲ್ಲಿಸಿದ್ದಾರೆ. ಒಂದು ವಾಹನಕ್ಕೆ ೮ ರೂಪಾಯಿಗಳಂತೆ ತೆಗೆದು ಕೊಳ್ಳುತ್ತಾರೆ. ವಾಹನಗಳ ಮಾಲೀಕರು ಪ್ರಯಾಣಿಕರಿಂದ